ತುಮಕೂರು ಡಿಸ್ಟ್ರಿಕ್ಟ್.

ತುಮಕೂರು ಡಿಸ್ಟ್ರಿಕ್ಟ್ ಸಬಾರ್ಡಿನೇಟ್ ಜಡ್ಜ್ರೀಯವರ ಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಶಿರಾ ತಾಲ್ಲೂಕು ಲಕ್ಕನಹಳ್ಳಿಲಿರುವ ಗುಜ್ಜಾರಪ್ಪನ ಮಗ ಕರೀತಿಮ್ಮನ ವಿಷಯದಲ್ಲಿ—

1884ನೇ ಇಸವಿ ದಿವಾಳಿ ಕೇಸ್ ನಂಬರ್ 2.

ಹುಕ್ಕುಂ.

ಮೇಲ್ಕಂಡ ಕರೀತಿಮ್ಮನು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಅರ್ಜಿ ಅವನು ರೂಬರೂ ಅರ್ಜೀದಾರನಾದ ಕರೀತಿಮ್ಮನ ಪರವಾಗಿ ಅವನನ್ನು ಮತ್ತು ಸದರೀಯವನ ಲೇಣೇದಾರ್‌ರಾದ ಸೋಮಪ್ಪ ಪುಲಿಂಗೆಂಣ 1, ಸಿದ್ದೇಗೌಡ 1, ಇವರ ತರಫ್ ಹಾಜರಾದ ಸಿದ್ದೇಗೌಡರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಲಿರುವ ಶಿರಿಯಂಣನ ಮಗ ಸೋಮಲಿಂಗಂಣ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಕರೀತಿಮ್ಮನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀ ಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಇಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸೂಲದ ಪಟ್ಟಿ.

ನಂಬರ್.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರಗಳ ವಾಸಸ್ಥಳ.	ಸೊಬಲಗ.	ಯಾವಾಗ ಲೇಣೇ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರು ಇದ್ದರೆ.	ಷರಾ.
1	ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಲಿರುವ ಸೋಮಲಿಂಗಂಣ ..	144–8–0	16ನೇ ನವಂಬರ್ 1883.	ಮದ್ದಗಿರಿ ಮುನಸಿಫ್ ಕೋರ್ಟು 1880ನೇ ಇಸವಿ 190ನೇ ನಂಬರ್ ಡಿಕ್ರಿ.	
2	ಶಿರಾ ತಾಲ್ಲೂಕು ಪುಲಿಕುಂಟೇಲಿರುವ ಸಿದ್ದೇಗೌಡ ..	10–0–0	ಡಿಟೋ	ಸೂಲ ತಕ್ಕೊಂಡ ಬಗೆ.	

1884ನೇ ಇಸವಿ ಫಿಬ್ರವರೀ 13ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತ ಖತ್‌ನಿಸಿ ಕೊಡಲ್ಪಟ್ಟಿತು.

ಸಿ. ಕೆಸ್,
ಸಬ್ ಜಡ್ಜ.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್ರೀಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 45.

ಮೃತಪಟ್ಟ ವೆಂಕಟಸುಬ್ಬಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ವೆಂಕಟರಾಮಯ್ಯ ಮೈನರ್ ಗಾರ್ಡಿಯ್ ಮತ್ತು ಚಿಕ್ಕಪ್ಪ ಗಿರಿಅಪ್ಪಯ್ಯ, ಮೃತಪಟ್ಟ ಸದರೀ ವೆಂಕಟಸುಬ್ಬಯ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮಂಡ್ಯ ತಾಲ್ಲೂಕು ನಾತನೂರಲ್ಲಿರುವ ಸದರೀ ವೆಂಕಟರಾಮಯ್ಯ, ಸದರೀ ವಾಸಸ್ಥನಾಗಿ ಮೃತ ಪಟ್ಟ ವೆಂಕಟಸುಬ್ಬಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟರಾಮಯ್ಯನ ಅರ್ಜಿಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟಸುಬ್ಬಿಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 50.

ಮೃತಪಟ್ಟ ಭೀಮಕೇನಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ವೆದವ್ಯಾಸಾಚಾರ್ಯರು, ಮೃತಪಟ್ಟ ಸದರೀ ಭೀಮಕೇನಾಚಾರ್ಯರಿಗೆ ದೊಡ್ಡಪ್ಪನ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರಲ್ಲಿರುವ ಸುಮತಿ ಅನಂತಾಚಾರ್ಯರು ಮತ್ತು ವೇದವ್ಯಾಸಾಚಾರ್ಯರು, ಶ್ರೀರಂಗಪಟ್ಟಣ ವಾಸಸ್ಥನಾಗಿ ಮೃತಪಟ್ಟ ಭೀಮಕೇನಾಚಾರ್ಯರ ಜಿಂದಗೀ ಬಗ್ಯಾಗಿ ಬರತಕ್ಕ ೩೦ ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೇದವ್ಯಾಸಾಚಾರ್ಯರ ಅರ್ಜೀಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭೀಮಕೇನಾಚಾರ್ಯರ ಆಸ್ತಿಗೆ ಹಕ್ಕುದಾರರಾದ ವಿಶಿಪ್ಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಫಿಬ್ರವರೀ ತಿಂಗಳು 2ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 53.

ಮೃತಪಟ್ಟ ಸೋಮೇಶ್ವರಗಿರಿಗೋಸಾಯಿ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಹರಿಗಿರಿಗೋಸಾಯಿ, ಮೃತಪಟ್ಟ ಸದರೀ ಸೋಮೇಶ್ವರಗಿರಿಗೊಸಾಯಿಗೆ ಅಂಣ, ದರ್ಯಾವುಗಿರಿಗೋಸಾಯಿಗೆ ಸಿಷ್ಯ ಆಗಬೇಕೆಂಬ ಹಕ್ಕುದಾರಿಮೇಲೆ ಮೈಸೂರು ಮಂಡಿಮೊಹಲಾ ಸ್ಥಳದ ಹರಿಗಿರಿಗೋಸಾಯಿ ಸದರೀ ವಾಸಸ್ಥರಾಗಿ ಮೃತಪಟ್ಟ ಸೋಮೇಶ್ವರಗಿರಿಗೋಸಾಯಿ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಹರಿಗಿರಿಗೋಸಾಯಿ ಅರ್ಜಿಯನ್ನು 1884ನೇ ಇಸವೀ ಮಾರ್ಚೀ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೋಮೇಶ್ವರಗಿರಿಗೋಸಾಯಿ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಫಿಬ್ರವರೀ ತಿಂಗಳು 7ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1884ನೇ ಇಸವಿ ಅರ್ಜೀ ನಂಬರ್ 59.

ಮೃತಪಟ್ಟ ಸಿದ್ದಲಿಂಗೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರಳಾದ ನಂಜಮ್ಮ, ಮೃತಪಟ್ಟ ಸದರೀ ಸಿದ್ದಲಿಂಗೇಗೌಡನಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಹೆಗ್ಗಡದೇವನ ಕೋಟೆ ತಾಲ್ಲೂಕು ಗಿಂಣಹಳ್ಳಿ ಸ್ಥಳದ ಸದರೀ ನಂಜಮ್ಮನು, ಸದರೀ ವಾಸಸ್ಥನಾಗಿ ಮೃತಪಟ್ಟ ಸಿದ್ದಲಿಂಗೇಗೌಡನ ಜಿಂದಗೀ ಬಗ್ಯಾಗಿ ಬರತಕ್ಕ 200 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಂಜಮ್ಮನ ಅರ್ಜಿಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 26ಲ್ಲು ಮೈಸೂರು ಮೊಕ್ಕಾಮಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿದ್ದಲಿಂಗೇಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪ್ಯರೂ ಈ ಕೋರ್ಟಿನಲ್ಲಿ ಹಾಜರು ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಫಿಬ್ರವರೀ ತಿಂಗಳು ತಾರೀಖು 11ರಲ್ಲು ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

164

1884ನೇ ಇಸವಿ ಅರ್ಜೀ ನಂಬರ್ 60.

ಮೃತಪಟ್ಟ ಭೂಪಂಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಗಿರಿಯಂಣ, ಮೃತಪಟ್ಟ ಸದರೀ ಭೂಪಂಣನಿಗೆ ಅಂಣ ಆಗಬೇಕೆಂಬ ಹಕ್ಕುದಾರೀ ಮೇಲೆ \ಶ್ರೀರಂಗಪಟ್ಣ ತಾಲ್ಲೂಕು ಗಂಜಾಂ ಸ್ಥಳದ ಸದರೀ ಗಿರಿಯಂಣನು, ಸದರೀ ವಾಸಸ್ಥನಾಗಿ ಮೃತಪಟ್ಟ ಭೂಪಂಣನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಗಿರಿಯಂಣನ ಅರ್ಜೀಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭೂಪಂಣನ ಆಸ್ತಿಗೆ ಹಕ್ಕುದಾರರಾದ ವಿಶೆಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 70.

ಮೃತಪಟ್ಟ ಕಾಕಯ್ಯ ವೊರಫ' ಅಚ್ಚಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ನಾರಣಪ್ಪ, ಮೃತಪಟ್ಟ ಸದರೀ ಕಾಕಯ್ಯ ವೊರಫ' ಅಚ್ಚಯ್ಯನಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಹುಣಸೂರು ತಾಲ್ಲೂಕು ಚಿಲಕುಂದದ ಹೋಬಳಿ ಹರವೆಗ್ರಾಮದಲ್ಲಿರುವ ಸದರೀ ನಾರಣಪ್ಪನು, ಡಿಟೋ ವಾಸಸ್ಥರಾಗಿ ಮೃತಪಟ್ಟ ಕಾಕಯ್ಯ ವೊರಫ' ಅಚ್ಚಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ನಾರಣಪ್ಪನ ಅರ್ಜೀಯನ್ನು 1884ನೇ ಇಸವಿ ಮಾರ್ಚೀ ತಿಂಗಳು ತಾರೀಖು 26ರಲ್ಲು ಮೈಸೂರು ಮೊಕ್ಕಾಂ ಈ ಕೋರ್ಟಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತ ಪಟ್ಟ ಕಾಕಯ್ಯ, ವೊರಫ' ಅಚ್ಚಯ್ಯನ ಆಸ್ತಿಗೆ ಹಕ್ಕುದಾರರಾದ ವಿಶೆಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

1884ನೇ ಇಸವಿ ಫಿಬ್ರವರೀ ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ.

ತಾರೀಖು 30ನೇ ಜನವರೀ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮಳವಳ್ಳಿ ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತೆವೇಜನ್ನು ಹಾಜರ್ಮಾಡಿದವನೆ ಆಗಲಿ ಅಥವಾ ವಾಪಸುಪಡಿಯಲಿಕ್ಕೆ ಅವನಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರನೆ ಆಗಲಿ ಈ ನೋಟೀಸ್ ತಾರೀಖು ಲಾಗಾಯಿತು ಒಂದು ತಿಂಗಳವಳಗಾಗಿ ಸಬ್ ರಿಜಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕ್ಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರು ರಿಜಿಸ್ಟ್ರೇಷ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದು ನಾಕೆಪಡಿಸಲ್ಪಡುವದು.

ನಂಬರು.	ದಸ್ತಾವೇಜು ಬರಹುಕೊಟ್ಟುವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಬಂದಿರೂಪ ತಾರೀಖು.	ರಿಜಿಸ್ಟ್ರಿಯ ತಾರೀಖು.	ದ್ಯಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
213	ಪೂರಿಗಾಲಿ ಕಸಬೇಲಿರುವ ವೆಂಕಟರಮಣಾಚಾರಿ ಮಗ ಶೀನಪ್ಪ, ಕ್ರಿಷ್ಣಪ್ಪಬ್ರಾಹ್ಮಣ	ಪೂರಿಗಾಲಿ ಹೋಬಳಿ ಮೈಕಿ ಮರಳಹಳ್ಳಿ ಗ್ರಾಮ ದಾಖಲೆ ಕೃಷ್ಣಯ್ಯಂಗಾರ್ ಹುಂಡೀಲಿರುವ ವೆಂಕಟನರಸಿಂಹ್ಮಾಚಾರ್ ಮಗ ಕೃಷ್ಣಾಚಾರಿ	20—1—82	20—1—82	(50) ರೂಪಾಯಿನ ಮನೆ ಆಧಾರ ಪತ್ರ.
81—82					

ಅಬ್ದುಲ್ ಖಾದರ್, ಕ. ಬಿ. ರಿಜಿಸ್ಟ್ರಾರ್.